# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.27/100 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 06-12-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶಂಕರಪ್ಪ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27/100
4. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
5. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು, ಬಾಣಸವಾಡಿ
6. ಶ್ರೀ ಕ್ರಿಸ್ಟೋಫರ್ ಕ್ರೂಜ್, ಸ್ಥಳೀಯರು, ಬಾಣಸವಾಡಿ

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
2. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,
3. ಶ್ರೀ ಅಮಿತ್ ಎ.ಪಿ., ಬೀದಿ ದೀಪ ಸಹಾಯಕ ಅಭಿಯಂತರರು
4. ಶ್ರೀ ಎ. ರಾಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು
5. ಶ್ರೀ ಎಂ.ಎಸ್. ಚವನ್, ಪಿಎಸ್ಐ, ಬಾಣಸವಾಡಿ
6. ಶ್ರೀ ವೆಂಕಟೇಶ್, ನಿರೀಕ್ಷಕರು
7. ಶ್ರೀ ಕೆ.ಎಸ್. ರವೀಂದ್ರನಾಥ್, ಅರಣ್ಯಾಧಿಕಾರಿಗಳು
8. ಶ್ರೀ ವಾಲ್ಟರ್ ಜೋಸೆಫ್, ಸ್ಥಳೀಯರು, ಬಾಣಸವಾಡಿ
9. ಶ್ರೀ ಪ್ರಶಾಂತ್, ಸ್ಥಳೀಯರು, ಬಾಣಸವಾಡಿ
10. ಶ್ರೀ ಎ.ಡಿ. ಸತ್ಯಾನಂದ, ಸ್ಥಳೀಯರು, ಬಾಣಸವಾಡಿ
11. ಶ್ರೀ ನಿಂಗಪ್ಪ (ಮಾರ್ಷಲ್), ಬಾಣಸವಾಡಿ
12. ಶ್ರೀಮತಿ ಮಣಿಮೇಘಲೈ, ಸ್ಥಳೀಯರು, ಬಾಣಸವಾಡಿ
13. ಶ್ರೀ ಕರ್ನಲ್ ಗೋರ್ಪಡೆ, ಸ್ಥಳೀಯರು, ಬಾಣಸವಾಡಿ
14. ಶ್ರೀ ಬಾಲಾಜಿ. ಪಿ, ಬಾಣಸವಾಡಿ
15. ಶ್ರೀ ರೊನಾಲ್ಡ್ ಡಿ. ಸಿಲ್ವಾ, ಸ್ಥಳೀಯರು, ಬಾಣಸವಾಡಿ

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ವಾರ್ಡ್ ವ್ಯಾಪ್ತಿಯ 3ನೇ ಕ್ರಾಸ್ ಜಂಕ್ಷನ್, 8ನೇ ಮುಖ್ಯರಸ್ತೆಯ ಇಂಟರ್ ಸೆಕ್ಷನ್‌ನ ಫುಟ್ ಪಾತ್‌ಗಳಲ್ಲಿ ಹೊಸ ಹೋಟೆಲ್‌ಗಳನ್ನು ನಿರ್ಮಾಣ ಮಾಡುತ್ತಿದ್ದು ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದರಿಂದ ಈ ಬಗ್ಗೆ ಸಂಬಂದಪಟ್ಟ ಅಧಕಾರಿಗಳು ಕ್ರಮ ವಹಿಸಲು ಸ್ಥಳೀಯರು ಸಭೆಗೆ ತಿಳಿಸಿದರು. | ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು ಸರ್ವಜ್ಞನಗರ ವಿಭಾಗ **MOH/SHI** |
| 2 | ವಾರ್ಡ್ ವ್ಯಾಪ್ತಿಯ 3ನೇ ಕ್ರಾಸ್ ಒಎಂಬಿಆರ್ ಲೇಔಟ್ ನಲ್ಲಿ ನೊಪಾರ್ಕಿಂಗ್ ಫಲಕಗಳನ್ನು ಹಾಕಬೇಕಾಗಿ ಸ್ಥಳೀಯರು ಸಭೆಯಲ್ಲಿ ಸೂಚಿಸಿದರು. | **Banasawadi Police Station (Traffic Department)** |
| 3 | ವಾರ್ಡ್ ವ್ಯಾಪ್ತಿಯ ಒಎಂಬಿಆರ್ ಲೇಔಟ್ 6ನೇ ಸಿ ಕ್ರಾಸ್‌ನಲ್ಲಿ ಕಳೆದ ಎರಡು ವಾರಗಳಿಂದ ರೂ.17 ಲಕ್ಷ ದರೋಡೆ ಆಗಿದ್ದು, 9ನೇ ಮುಖ್ಯರಸ್ತೆ ಜಂಕ್ಷನ್, 2ಕೆ ಕ್ರಾಸ್ ನಲ್ಲಿ ಬೆಳಿಗ್ಗೆ ಸುಮಾರು 3.00 ಗಂಟೆಯಿಂದ 4.00 ಗಂಟೆ ಅವಧಿಯಲ್ಲಿ ಮನೆಯ ಮುಂದಿನ ಟ್ಯಾಪ್, ಚಪ್ಪಲ್, ಸೈಕಲ್ ಹಾಗು ಮೊಬೈಲ್ ಇತರೆ ವಸ್ತುಗಳನ್ನು ಕಳ್ಳತನ ಮಾಡುತ್ತಿರುವುದರಿಂದ 3.00 ರಿಂದ 4.00 ಗಂಟೆ ಅವಧಿಯಲ್ಲಿ ಸಂಬಂಧಪಟ್ಟ ಇಲಾಖೆಯವರು ಸೂಕ್ತ ಕ್ರಮವನ್ನು ಕೈಗೊಳ್ಳಲು ಸ್ಥಳೀಯರು ತಿಳಿಸಿದರು. | **Ramamurthy Nagar Police Station Ramamurthy Nagar (Law & Order Department)** |
| 4 | ವಾರ್ಡ್ ವ್ಯಾಪ್ತಿಯ ಎಕೆ ಕಾಲೋನಿ, 8ನೇ ಎ ಮೇನ್, 2ಡಿ ಕ್ರಾಸ್ 1ನೇ ಬ್ಲಾಕ್, ವಿಜಯಬ್ಯಾಂಕ್ ಕಾಲೋನಿ, 1ನೇ ಮುಖ್ಯರಸ್ತೆಗಳಲ್ಲಿ ಬೀದಿ ದೀಪಗಳು ಉರಿಯದೇ ಇರುವುದರಿಂದ ಈ ಪ್ರದೇಶದಲ್ಲಿ ರಾತ್ರಿ ಸಮಯದಲ್ಲಿ ಓಡಾಡುವ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಗೆ ತಿಳಿಸಿದರು. | **ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ವಿಭಾಗ–ಪೂರ್ವ ವಲಯ** |
| 5 | ವಾರ್ಡ್ ವ್ಯಾಪ್ತಿಯ 37 ಸ್ಥಳಗಳಲ್ಲಿ ಸುಮಾರು 40 ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ Feedback ಎಲ್ಲಿದೆ ಹಾಗೂ ಈ ಕ್ಯಾಮರಾಗಳು ಕಾರ್ಯಚರಣೆಯಲ್ಲಿ ಇದೆಯೋ ಇಲ್ಲವೋ ಎಂಬ ಬಗ್ಗೆ ಮಾಹಿತಿಯನ್ನು ಹಾಗೂ Integrated Command Control ನ್ನು ಸ್ಥಾಪಿಸಿದರೆ ಕಳ್ಳತನ ಮೊದಲಾದ ಕೃತ್ಯಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ ಎಂದು ಸ್ಥಳೀಯರು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- BBMP** |
| 6 | ವಾರ್ಡ್ ವ್ಯಾಪ್ತಿಯ ಜೈ ಜವಾನ್ ನಗರ ಹಾಗೂ ಪೌಲ್ರಿ ಚರ್ಚ್ ಬಳಿ ಮರವು ಹೆಮ್ಮರವಾಗಿ ಬೆಳೆದು ರಸ್ತೆಯಲ್ಲಿ ಸ್ಟ್ರೀಟ್ ಲೈಟ್‌ನ್ನು ಆವರಿಸಿರುವುದರಿಂದ ರಾತ್ರಿಯ ವೇಳೆ | (ವಲಯ ಅರಣ್ಯಾಧಿಕಾರಿಗಳು) **(Forest Department)** ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ |

| | | |
|---|---|---|
| | ಸಾರ್ವಜನಿಕರು ಓಡಾಡಲು ಅನಾನುಕೂಲವಾಗುತ್ತಿರುವುದರಿಂದ ಸಂಬಂಧಪಟ್ಟ ಅರಣ್ಯ ಇಲಾಖೆಯವರು ಬೆಳೆದು ನಿಂತಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. | ಕೊಂಬೆ ರೆಂಬೆಗಳನ್ನು ಕಟಾವು ಮಾಡಲು ಕ್ರಮ ವಹಿಸುವುದು. |
| 7 | ವಾರ್ಡ್ ವ್ಯಾಪ್ತಿಯ 7ನೇ ಮುಖ್ಯರಸ್ತೆ, 8ನೇ ಮುಖ್ಯರಸ್ತೆ ಗಳಲ್ಲಿ ನೋ–ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸಿದ್ದು, ಅವರಲ್ಲಿ ಎಷ್ಟು ಮೀಟರ್‌ಗಳವರೆಗೂ ವಾಹನಗಳನ್ನು ನಿಲ್ಲಿಸಬಾರದೆಂದು ಸೂಚಿಸಿಲ್ಲವಾದ್ದರಿಂದ ಸಾರ್ವಜನಿಕರಿಗೆ ವಾಹನಗಳನ್ನು ಪಾರ್ಕಿಂಗ್ ಮಾಡಲು ತಿಳಿಯುತ್ತಿಲ್ಲದಿರುವುದರಿಂದ ನೋ–ಪಾರ್ಕಿಂಗ್ ಬೋರ್ಡ್‌ಗಳಲ್ಲಿ ಪರಿಮಿತ ಮೀಟರ್‌ಗಳನ್ನು ನಮೂದಿಸುವಂತೆ ಸ್ಥಳೀಯರು ಸಭೆಯಲ್ಲಿ ತಿಳಿಸಿದರು | **Banasawadi Police Station (Traffic Department)** |
| 8 | ವಾರ್ಡ್‌ವ್ಯಾಪ್ತಿಯ ಜಯಜವಾನ್ ನಗರದಲ್ಲಿ Intensive Cleaning ಮಾಡಬೇಕಾಗಿ ಹಾಗೂ ಬಾಣಸವಾಡಿಯ ಮಿಲಿಟರಿ ಗ್ಯಾರಿಸನ್, ಅಯ್ಯಪ್ಪ ದೇವಸ್ಥಾನದ ಬಳಿ ಕಳ್ಳತನಗಳು ಹೆಚ್ಚಾಗಿ ನಡೆಯುತ್ತಿರುವದರಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸುವಂತೆ, ಶ್ರೀಮತಿ ಮಣಿಮೇಘಲೈರವರು ಸಭೆಯಲ್ಲಿ ಪ್ರಸ್ತಾಪಿಸಿದರು | ಸಹಾಯಕ ಕಾರ್ಯಪಾಲಕ ಅಭಿಯಂತರರು / ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ **TEC- BBMP** |
| 9 | ವಾರ್ಡ್ ವ್ಯಾಪ್ತಿಯ 8ನೇ ಮುಖ್ಯರಸ್ತೆ, 1ನೇ ಮುಖ್ಯ ರಸ್ತೆಗಳ ರಾಜಕಾಲುವೆಗಳಲ್ಲಿ ಯತೇಚ್ಚವಾಗಿ ತುಂಬಿರುವ ಹೂಳು (ಮಣ್ಣು) ನ್ನು ತೆಗೆದು ನೀರು ಸರಾಗವಾಗಿ ಹರಿಯುವಂತೆ ಕ್ರಮವಹಸಿಲು ಕ್ರಿಸ್ಟೋಫರ್ ಕ್ರಜ್‌ರವರು ಸಭೆಯಲ್ಲಿ ಪ್ರಸ್ತಾಪಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- SWD** |
| 10 | ಬಾಣಸವಾಡಿ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ವಸತಿಯೇತರ ಕಟ್ಟಡಗಳು ವಾಣಿಜ್ಯ ಕಟ್ಟಡಗಳಾಗಿ ಪರಿವರ್ತಿಸುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸ್ಥಳೀಯರಾದ ಕ್ರಿಸ್ಟೋಫರ್ ಕ್ರಜ್‌ರವರು ಸಭೆಯಲ್ಲಿ ಸೂಚಿಸಿದರು. | ಆರೋಗ್ಯ ವೈಧ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು ಸರ್ವಜ್ಞನಗರ ವಿಭಾಗ **MOH/SHI** |
| 11 | ವಾರ್ಡ್ ವ್ಯಾಪ್ತಿಯ 8ನೇ ಮುಖ್ಯರಸ್ತೆಯಲ್ಲಿ ರಸ್ತೆಯು ಹದಗೆಟ್ಟಿರುವುದರಿಂದ ರಸ್ತೆ, ಚರಂಡಿ, ಕಲ್ವರ್ಟ್‌ಗಳನ್ನು (Culvert) ಮಾಡಬೇಕಾಗಿ ಸ್ಥಳೀಯರಾದ ಪ್ರಶಾಂತ್‌ರವರು ಸಭೆಯಲ್ಲಿ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE-** ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅಮೃತ್ ನಗರೋತ್ಥಾನ ಅನುದಾನದ ಅಡಿಯಲ್ಲಿ ತೆಗೆದುಕೊಳ್ಳಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅತೀ ಶೀಘ್ರವಾಗಿ ಕಲ್ವರ್ಟ್ ಮಾಡಲಾಗುವುದೆಂದು ಸಭೆಗೆ ತಿಳಿಸಲಾಯಿತು. |
| 12 | ವಾರ್ಡ್ ವ್ಯಾಪ್ತಿಯ 2 'ಕೆ' ಕ್ರಾಸ್, ಹೆಚ್‌ಆರ್‌ಬಿ ಆರ್ 1ನೇ ಬ್ಲಾಕ್ ಮತ್ತು 3ನೇ ಕ್ರಾಸ್‌ಗಳಲ್ಲಿ ರಸ್ತೆಗಳು ತೀರಾ | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು |

| | | |
|---|---|---|
| | ಹದಗೆಟ್ಟಿದ್ದು, ವಾಹನ ಸವಾರರಿಗೆ ಓಡಾಡಲು ತೊಂದರೆಯಾಗುದ್ದು, ಈ ರಸ್ತೆಗಳನ್ನು DLP ಅಡಿಯಲ್ಲಿ ಅನುದಾನವಾಗಿದ್ದು, ರಸ್ತೆಯನ್ನು Resurface ಮಾಡಿಕೊಡಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಕರ್ನಲ್ ಗೋಪ್ರಡೆಯವರು ಸಭೆಯಲ್ಲಿ ಕೋರಿದರು. | **AEE/AE- BBMP** |
| 13 | ವಾರ್ಡ್ ವ್ಯಾಪ್ತಿಯಲ್ಲಿ 2020-21, 2021-22ನೇ ಸಾಲಿನ ನವ ನಗರೋತ್ಥಾನದ ಅಡಿಯಲ್ಲಿ 96 ರಸ್ತೆಗಳ Asphalting ಗೆ ಅನುದಾನ ಹಂಚಿಕೆಯಾಗಿರುತ್ತದೆ. ಇದಕ್ಕೆ ಸಂಬಂದಿಸಿದಂತೆ ಶ್ಯಾಮಣ್ಣ ಲೇಔಟ್ ಸೇರಿದಂತೆ 8 ರಸ್ತೆಗಳು Asphalting ಆಗಿರುವುದಿಲ್ಲ. ಈ ಬಗ್ಗೆ ಎಷ್ಟು ರಸ್ತೆಗಳಿಗೆ ಅಂದಾಜಿನಲ್ಲಿ ಸೇರ್ಪಡೆಗೊಳಿಸಲಾಗಿದೆ ಮತ್ತು ಯಾವ ಯಾವ ಹೊಸ ರಸ್ತೆಗಳನ್ನು ಸೇರ್ಪಡೆಗೊಳಿಸಿಕೊಳ್ಳಲಾಗಿದೆ ಎಂದು ಖಚಿತ ಮಾಹಿತಿಯನ್ನು ಒದಗಿಸಬೇಕಾಗಿ ಸ್ಥಳೀಯರಾದ ಶ್ರೀ ಅಮಿತ್ ನಿಗ್ಲಿಯವರು ಸಭೆಯಲ್ಲಿ ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- BBMP** |
| 14 | ವಾರ್ಡ್ ವ್ಯಾಪ್ತಿಯ ಜಯಜವಾನ್ ನಗರದಲ್ಲಿ ಬಿಬಿಎಂಪಿಯ ಸಿಸಿ ಕ್ಯಾಮರದ ಪೋಲ್ ಹಾನಿ (ಡ್ಯಾಮೇಜ್) ಗೊಳಗಾಗಿ ಕೆಳಗೆ ಬಿದ್ದಿದ್ದು ಅದನ್ನು ಸರಿಪಡಿಸಬೇಕಾಗಿ ಶ್ರೀಮತಿ ಮಣಿಮೇಘಲೈ ರವರು ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು **AEE/AE- BBMP** |
| 15 | ಬಾಣಸವಾಡಿ ವ್ಯಾಪ್ತಿಯಲ್ಲಿ ಟೈಯರ್ ಶಾಪ್, ಹೋಟೆಲ್‌ಗಳು, ತರಕಾರಿ ಅಂಗಡಿಗಳು ಫುಟ್‌ಪಾತ್ (ಪಾದಚಾರಿ ಮಾರ್ಗ) ಗಳನ್ನು ಒತ್ತುವರಿ ಮಾಡಿಕೊಂಡಿದ್ದು ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಫುಟ್‌ಪಾತ್ ಡ್ರೈವ್ ಮಾಡಬೇಕೆಂದು ಸ್ಥಳೀಯರು ಸಭೆಗೆ ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು/ ಹಿರಿಯ ಆರೋಗ್ಯ ಪರಿವೀಕ್ಷಕರು ಸರ್ವಜ್ಞನಗರ ವಿಭಾಗ **MOH/SHI** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ ಕಮಿಟಿ ಸಭೆಗಳಿಗೆ ಗೈರು ಹಾಜರಾಗಿರುವ ಇಲಾಖೆಯವರು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

06.12.2022

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

6/12/22

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27/100, ಬಾಣಸವಾಡಿ

<u>ಪ್ರತಿಯನ್ನು</u>

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.